# ಮುಖ್ಯ ಚುನಾವಣಾಧಿಕಾರಿಗಳ ಕಚೇರಿ, ಕರ್ನಾಟಕ

ನಿರ್ವಾಚನ ನಿಲಯ,ಶೇಷಾದ್ರಿ ರಸ್ತೆ, ಬೆಂಗಳೂರು-560 001.
ದೂರವಾಣಿ- 080-22224212

**ಸಂಖ್ಯೆ.** DPAR 07 CHULOSA (MC) 2024 **ದಿನಾಂಕ:** 01.05.2024

## ಸಾರ್ವತ್ರಿಕ ಲೋಕಸಭಾ ಚುನಾವಣೆ-2024
## ಮತ್ತು ಉಪ ಚುನಾವಣೆ 36-ಸುರಪುರ ವಿಧಾನಸಭಾ ಕ್ಷೇತ್ರ-2024

## ಪತ್ರಿಕಾ ಪ್ರಕಟಣೆ

1. **3ನೇ ಹಂತದ ಲೋಕಸಭಾ ಕ್ಷೇತ್ರಗಳ ಮನೆಯಿಂದ ಮತದಾನದ ವಿವರ:**
   85 ವರ್ಷಕ್ಕಿಂತ ಮೇಲ್ಪಟ್ಟ **21,892 (94.31%)** ಮತದಾರರು ಈವರೆಗೆ ತಮ್ಮ ಮನೆಯಿಂದ ಮತ ಚಲಾಯಿಸಿದ್ದಾರೆ, ಒಟ್ಟು **23,213** ಮತದಾರರಿಗೆ ಮನೆಯಿಂದ ಮತದಾನ ಮಾಡಲು ಅನುಮೋದಿಸಲಾಗಿದೆ. ಅದೇ ರೀತಿ ಶೇಕಡ 40% ಕ್ಕಿಂತ ಹೆಚ್ಚಿನ ದಿವ್ಯಾಂಗ ಮತದಾರರು (PwD) ತಮ್ಮ ಮನೆಯಿಂದ **10,566 (96.96%)** ಮತ ಚಲಾಯಿಸಿದ್ದಾರೆ, ಒಟ್ಟು **10,897** ಮತದಾರರಿಗೆ ಮನೆಯಿಂದ ಮತದಾನ ಮಾಡಲು ದಿನಾಂಕ 30.04.2024 ರಿಂದ ಅನುಮೋದಿಸಲಾಗಿದೆ. ಒಟ್ಟು **34,110** ಮತದಾರರು ಮನೆಯಿಂದ ಮತದಾನ ಮಾಡಲು 12D ನಮೂನೆಯನ್ನು ಸಲ್ಲಿಸಿರುತ್ತಾರೆ. ಒಟ್ಟು ಈವರೆಗೆ **32,458(95.16%)** ಮತದಾರರು ಮನೆಯಿಂದ ತಮ್ಮ ಮತವನ್ನು ಚಲಾಯಿಸಿದ್ದಾರೆ.

2. **ಚುನಾವಣಾ ವೆಚ್ಚದ ಮೇಲ್ವಿಚಾರಣೆ :**
   **ಜಪ್ತಿ:**

ಮೌಲ್ಯ ರೂ. ಕೋಟಿಯಲ್ಲಿ

| ಜಪ್ತಿ ಮಾಡಲಾದ ವಸ್ತುಗಳು | | | ಪೊಲೀಸ್/ ಕ್ಷಿಪ್ರ ಪಡೆಗಳು (FST)/ ಸ್ಥಿರ ಕಣ್ಗಾವಲು ತಂಡಗಳು(SST)/ | | ಅಬಕಾರಿ | | ಆದಾಯ ತೆರಿಗೆ | | ವಾಣಿಜ್ಯ ತೆರಿಗೆ | | ಒಟ್ಟು ಮೊತ್ತ | |
|---|---|---|---|---|---|---|---|---|---|---|---|---|
| | | | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು |
| **ನಗದು** | | ಮೌಲ್ಯ | 0.51 | 69.85 | - | - | - | 26.85 | - | - | 0.51 | 96.70 |
| **ಮದ್ಯ** | | Qty (in lakhs ltrs) | 0.00088 | 0.20 | 0.10 | 147.42 | - | - | - | - | 0.10 | 147.62 |
| | | ಮೌಲ್ಯ | 0.00449 | 0.84 | 0.17 | 178.17 | - | - | - | - | 0.17 | 179.01 |
| **ಡ್ರಗ್ಸ್** | | Qty (KGs) | 0.12 | 487.55 | 0.07 | 129.12 | - | - | - | - | 0.19 | 616.67 |
| | | ಮೌಲ್ಯ | 0.01 | 11.19 | 0.0010 | 0.36 | - | - | - | - | 0.01 | 11.55 |
| **ಅಮೂಲ್ಯ ಲೋಹ** | **ಚಿನ್ನ** | Qty (KGs) | - | 70.58 | - | - | 1.69 | 32.06 | - | 36.31 | 1.69 | 138.94 |
| | | ಮೌಲ್ಯ | - | 43.22 | - | - | 1.10 | 21.12 | - | 13.51 | 1.10 | 77.85 |
| | **ಬೆಳ್ಳಿ** | Qty (KGs) | - | 294.78 | - | - | - | - | - | 7.59 | - | 302.37 |
| | | ಮೌಲ್ಯ | - | 1.12 | - | - | - | - | - | 0.06 | - | 1.18 |
| | **ವಜ್ರ** | Qty (carat) | - | - | - | - | - | 47.23 | - | - | - | 47.23 |
| | | ಮೌಲ್ಯ | - | - | - | - | - | 1.22 | - | - | - | 1.22 |
| **ಉಚಿತ ಉಡುಗೊರೆ** | | ಮೌಲ್ಯ | - | 2.41 | - | - | - | - | - | 6.23 | - | 8.64 |
| **ಇತರೆ** | | ಮೌಲ್ಯ | - | 12.22 | - | 0.03 | - | - | - | 60.31 | - | 72.55 |
| ಒಟ್ಟು ಮೊತ್ತ | | | **0.52** | **140.85** | **0.17** | **178.56** | **1.10** | **48.19** | **-** | **80.11** | **1.79** | **448.71** |

3. **ದಾಖಲಾದ ಪ್ರಕರಣಗಳ ಕುರಿತು ಮಾಹಿತಿ:**
   - **a.** ಕ್ಷಿಪ್ರ ಪಡೆಗಳು (**FS**), ಸ್ಥಿರ ಕಣ್ಗಾವಲು ತಂಡಗಳು (**SST**) ಮತ್ತು ಪೊಲೀಸ್ ಅಧಿಕಾರಿಗಳು ನಗದು, ಮದ್ಯ, ಡ್ರಗ್ಸ್, ಬೆಲೆಬಾಳುವ ಲೋಹ ಮತ್ತು ಉಚಿತ ಉಡುಗೊರೆ (**Freebies**) ವಶಪಡಿಸಿಕೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ **2,249** ಎಫ್ಐಆರ್‌ಗಳನ್ನು ದಾಖಲಿಸಿದ್ದಾರೆ.
   - **b.** ಅಬಕಾರಿ ಇಲಾಖೆ ಘೋರ ಅಪರಾಧ ಅಡಿಯಲ್ಲಿ **3,280** ಪ್ರಕರಣಗಳನ್ನು ದಾಖಲಿಸಿದೆ**,** ಪರವಾನಗಿ ಉಲ್ಲಂಘನೆ ಅಡಿಯಲ್ಲಿ **5,362** ಪ್ರಕರಣ ದಾಖಲಿಸಿದೆ. NDPS ಅಡಿಯಲ್ಲಿ **186** ಪ್ರಕರಣಗಳನ್ನು ಮತ್ತು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಸೆಕ್ಷನ್ 15(a) ಅಡಿಯಲ್ಲಿ **32,281** ಪ್ರಕರಣಗಳನ್ನು ದಾಖಲಿಸಿದೆ, ಮತ್ತು **2,011** ವಿವಿಧ ರೀತಿಯ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

4. **ವಿಶೇಷ ವರದಿಗಳು:**
   - **a.** ಆದಾಯ ತೆರಿಗೆ ಇಲಾಖೆಯವರು ರೂ. **1,09,89,064/-** ಮೌಲ್ಯದ **1.69 kg** ಚಿನ್ನವನ್ನು ಸಾರಸ್ವತ ಬ್ಯಾಂಕ್ ಲಾಕರ್ ಚಾಮರಾಜಪೇಟೆ ಶಾಖೆ ಬೆಂಗಳೂರು**,** ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ, ಇಲ್ಲಿ ವಶಪಡಿಸಿಕೊಂಡಿದ್ದಾರೆ.
   - **b.** ಪೊಲೀಸ್ ಇಲಾಖೆಯವರು ರೂ.**46,00,000/-** ನಗದು ಹಣವನ್ನು ಎಜಿಬಿ ಲೇಔಟ್**,** ಸಪ್ತಗಿರಿ ಆಸ್ಪತ್ರೆ ಎದುರು**,** ಹೆಸರಗಟ್ಟಾ ಮುಖ್ಯ ರಸ್ತೆ**,** ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ, ಇಲ್ಲಿ ವಶಪಡಿಸಿಕೊಂಡಿದ್ದಾರೆ.

5. **ಸಾರ್ವಜನಿಕ ಕುಂದು ಕೊರತೆ ಪರಿಹಾರ:**
   ಮತದಾರರ ಸಹಾಯವಾಣಿಯ ಮೂಲಕ ಸ್ವೀಕರಿಸಿದ **36,788** ಕರೆಗಳ ಪೈಕಿ **36,476** ಜನರು ಮಾಹಿತಿಯನ್ನು ಕೋರಿದ್ದಾರೆ, **39** ನಾಗರೀಕರು ಪ್ರತಿಕ್ರಿಯೆ ನೀಡಿದ್ದಾರೆ, **36** ನಾಗರೀಕರು ಸಲಹೆಗಳನ್ನು ನೀಡಿದ್ದಾರೆ ಮತ್ತು **237** ನಾಗರೀಕರು ದೂರುಗಳನ್ನು ದಾಖಲಿಸಿದ್ದಾರೆ. ಒಟ್ಟು **36,788** ಕರೆಗಳನ್ನು ವಿಲೇವಾರಿ ಮಾಡಲಾಗಿದೆ. ಹೆಚ್ಚುವರಿಯಾಗಿ NGRS ಪೋರ್ಟಲ್‌ನಲ್ಲಿ **20,813** ನಾಗರೀಕರಿಂದ ದೂರುಗಳನ್ನು ದಾಖಲಿಸಲಾಗಿದೆ, ಅದರಲ್ಲಿ **20,303** ದೂರುಗಳನ್ನು ವಿಲೇವಾರಿ ಮಾಡಲಾಗಿದೆ.

6. **ಸಿವಿಜಿಲ್ (cVIGIL):**
   cVIGIL ಅಪ್ಲಿಕೇಶನ್ ಮೂಲಕ **29,451** ದೂರುಗಳನ್ನು ಸ್ವೀಕರಿಸಲಾಗಿದೆ. ಸ್ವೀಕರಿಸಿದ ಪ್ರಮುಖ **17,051** ದೂರುಗಳು ಅನುಮತಿಯಿಲ್ಲದ ಪೋಸ್ಟರ್‌ಗಳು/ಬ್ಯಾನರ್‌ಗಳಿಗೆ ಸಂಬಂಧಿಸಿವೆ, **1,136** ಕಡ್ಡಾಯ ಘೋಷಣೆ ಇಲ್ಲದ ಪೋಸ್ಟರ್‌ಗಳು, ಆಸ್ತಿ ವಿರೂಪಗೊಳಿಸುವಿಕೆ **345,** ಹಣವಿತರಣೆ **255**, ಉಡುಗೊರೆಗಳು/ಕೂಪನ್‌ಗಳ ವಿತರಣೆ **146, ನಿ**ಷೇಧದ ಅವಧಿಯಲ್ಲಿ ಪ್ರಚಾರ **70**, ಮದ್ಯಹಂಚಿಕೆ **158,** ಅನುಮತಿಯಿಲ್ಲದೆ ವಾಹನ ಬೆಂಗಾವಲು **140**, ಧಾರ್ಮಿಕ ಅಥವಾ ಸಮುದಾಯಿಕ ಭಾಷಣಗಳು/ಸಂದೇಶಗಳು **86,** ಬಂದೂಕುಗಳ ಪ್ರದರ್ಶನ ಬೆದರಿಕೆ **70,** ಇತರೆ **27,772** ಇವುಗಳಲ್ಲಿ ದೂರುಗಳು ಸರಿಯಾಗಿವೆ ಎಂದು ಕಂಡುಹಿಡಿದು ಸೂಕ್ತಕ್ರಮ ಕೈಗೊಳ್ಳಲಾಗಿದೆ.

7. **ಮಾಧ್ಯಮ (Media):**
   ಇಮೇಲ್ ಮೂಲಕ ಸ್ವೀಕರಿಸಿದ **366** ದೂರುಗಳು ಮತ್ತು ಪತ್ರಗಳ ಮೂಲಕ ಸ್ವೀಕರಿಸಿದ **867** ದೂರುಗಳು ಸುದ್ದಿ ಪತ್ರಿಕೆಗಳು ಮೂಲಕ ಸ್ವೀಕರಿಸಿದ **40** ದೂರುಗಳು, ಟಿವಿ ಚಾನೆಲ್‌ಗಳ ಮೂಲಕ ಸ್ವೀಕರಿಸಿದ **81** ದೂರುಗಳು ಮತ್ತು ಸಾಮಾಜಿಕ ಜಾಲತಾಣ ಮಾಧ್ಯಮ ಮೂಲಕ ಸ್ವೀಕರಿಸಿದ **83** ದೂರುಗಳು ಹೀಗೆ ಒಟ್ಟು ಸ್ವೀಕರಿಸಿದ **1,437** ದೂರುಗಳ ಪೈಕಿ **1,437** ದೂರುಗಳನ್ನು ವಿಲೇವಾರಿ ಮಾಡಲಾಗಿದೆ

8. **ಸುವಿಧಾ (SUVIDHA):**
   ಸುವಿಧಾ ಅಡಿಯಲ್ಲಿ ಅನುಮತಿಗಳಿಗಾಗಿ, **10,983** ಅರ್ಜಿಗಳು ಸ್ವೀಕರಿಸಲಾಗಿದೆ, ಅದರಲ್ಲಿ **9,022** ಅರ್ಜಿಗಳನ್ನು ಅಂಗೀಕರಿಸಲಾಗಿದೆ ಮತ್ತು **1,372** ಅರ್ಜಿಗಳನ್ನು ತಿರಸ್ಕರಿಸಲಾಗಿದೆ. **22** ಅರ್ಜಿಗಳು ಪ್ರಗತಿಯಲ್ಲಿದೆ. **202** ಅರ್ಜಿಗಳು ಬಾಕಿ ಉಳಿದಿವೆ ಮತ್ತು **365** ಅರ್ಜಿಗಳನ್ನು ರದ್ದುಗೊಳಿಸಲಾಗಿ .

*********